ಗೋದಾವರಿ ನದಿ ನೀರು ದಿಕ್ಕು ಬದಲಾವಣೆ ಮಾಡುವುದು

45 (121) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋದಾವರಿ ನದಿ ದಿಕ್ಕು ಬದಲಾವಣೆ ಅನ್ವಯ ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರ ರಾಜ್ಯಗಳಿಗೆ ದೊರೆತ ನೀರಿನ ಪ್ರಮಾಣ ಎಷ್ಟು;

ಆ) ಮುಳವಾಡ ಏತ ನೀರಾವರಿ ಹಾಗೂ ಹಿಪ್ಪರಗಿ ಯೋಜನೆಯಲ್ಲಿ ಅವಕಾಶ ವಂಚಿತವಾದ ಜಮಖಂಡಿ ತಾಲ್ಲೂಕಿನ ಸಾವಳಗಿ ಭಾಗದ ಜಮೀನುಗಳಿಗೆ ಗೋದಾವರಿ ನದಿ ದಿಕ್ಕು ಬದಲಾವಣೆಯಿಂದಾಗಿ ಎಷ್ಟು ಟಿ.ಎಂ.ಸಿ. ನೀರನ್ನು ಕೊಡಲು ಸರ್ಕಾರ ಬದ್ದವಿದೆ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಆಂಧ್ರಪ್ರದೇಶ ರಾಜ್ಯದ ಇಂದಿರಾ ಸಾಗರ ಪೊಲ್ಲಾವರಂ ಯೋಜನೆಯಡಿ ಒಟ್ಟು 80.00 ಟಿಎಂಸಿ ನೀರನ್ನು ಕೃಷ್ಣಾ ನದಿಗೆ ತಿರುವು ಗೊಳಿಸಲಾಗುತ್ತಿದೆ. ಆಂಧ್ರಪ್ರದೇಶ 45.00 ಟಿಎಂಸಿ, ಕರ್ನಾಟಕ ಮತ್ತು ಮಹಾರಾಷ್ಟ್ರ ಕ್ರಮವಾಗಿ 21.00 ಟಿಎಂಸಿ ಹಾಗೂ 14.00 ಟಿಎಂಸಿ ನೀರನ್ನು ಉಪಯೋಗಿಸಬಹುದಾಗಿದೆ.

ಆ) ಕರ್ನಾಟಕಕ್ಕೆ ಲಭಿಸಿರುವ ನೀರನ್ನು ವಿವಿಧ ಉದ್ದೇಶಕ್ಕೆ ಬಳಸಿಕೊಳ್ಳುವ ಬಗ್ಗೆ ಪರಿಶೀಲಿಸಲು ಸರ್ಕಾರ ದಿನಾಂಕ: 20/01/2010 ರ ಆದೇಶದಲ್ಲಿ ಸಮಿತಿಯನ್ನು ರಚಿಸಿದೆ. ಈ ಸಮಿತಿಯ ವರದಿ ಬಂದ ಮೇಲೆ ನೀರಿನ ಹಂಚಿಕೆಯ ಬಗ್ಗೆ ನಿರ್ಧರಿಸಲಾಗುವುದು.

ಶಿವಮೊಗ್ಗ ನಗರ ಮತ್ತು ಶಿವಮೊಗ್ಗ ಗ್ರಾಮಾಂತರದಲ್ಲಿ ತಾಲ್ಲೂಕು ಕಛೇರಿ ಪ್ರಾರಂಭಿಸುವುದು

46 (24) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರ ಮತ್ತು ಶಿವಮೊಗ್ಗ ಗ್ರಾಮಾಂತರ ಎಂದು ವಿಂಗಡಿಸಿರುವುದರಿಂದ 2 ತಾಲ್ಲೂಕುಗಳನ್ನಾಗಿ ರಚಿಸಿ, ತಹಶೀಲ್ದಾರ್

ಕಾರ್ಯಾಲಯ ತೆರೆಯುವುದು ಅವಶ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಯಾವ ದಿನಾಂಕದಿಂದ ಎರಡೂ ತಾಲ್ಲೂಕು ಕಛೇರಿಗಳನ್ನು ತೆರೆಯಲು ಕಾರ್ಯಗತಗೊಳಿಸಲಾಗುವುದು?

ಇ) ಶಿವಮೊಗ್ಗ ನಗರ ತಾಲ್ಲೂಕಿಗಾಗಿ ವಿಶೇಷ ತಹಶೀಲ್ದಾರ್ ಹುದ್ದೆಯನ್ನೂ ಮಂಜೂರು ಮಾಡಿ ಆದೇಶ ಹೊರಡಿಸಲಾಗಿದೆಯೇ; ಹಾಗಿದ್ದಲ್ಲಿ ಯಾವಾಗ ಆದೇಶ ಹೊರಡಿಸಲಾಗುವುದು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಮತ್ತು ಆ) ಬಂದಿದೆ. ಈ ವಿಷಯ ಕುರಿತು ದಿನಾಂಕ: 30.05.2009 ರಂದು ಶ್ರೀ ಎಂ.ಬಿ.ಪ್ರಕಾಶ್, ನೇತೃತ್ವದ ತಾಲ್ಲೂಕು ಪುನರ್ ಸಮಿತಿಯು ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಶಿವಮೊಗ್ಗ ಪಟ್ಟಣವನ್ನು ವಿಭಜಿಸಿ, ಎರಡು ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಶಿಫಾರಸ್ಸು ಮಾಡಿರುವುದಿಲ್ಲ. ಆದರೆ ಒಬ್ಬ ಹೆಚ್ಚುವರಿ ತಹಶೀಲ್ದಾರ್‌ರವರನ್ನು ನೇಮಕ ಮಾಡಲು ಶಿಫಾರಸ್ಸು ಮಾಡಿರುತ್ತದೆ.

ಇ) – ಇಲ್ಲ –

ವಿಕಲಚೇತನರ ಮತ್ತು ವಿಧವೆಯರ ಮಾಸಿಕ ವೇತನ ಮಂಜೂರು ಮಾಡುವ ಬಗ್ಗೆ

47 (25) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾರ್ಷಿಕ ಆದಾಯ ಮಿತಿ ರೂ.6000/– ಮೀರಿದ ಕಾರಣಗಳಿಗಾಗಿ ಎಷ್ಟು ಜನ ವಿಧವೆಯರಿಗೆ ಮತ್ತು ವಿಕಲಚೇತನರಿಗೆ ಈವರೆಗೂ ಮಾಸಿಕ ಪಿಂಚಣಿ ಮಂಜೂರು ಮಾಡಲಾಗಿಲ್ಲ (ಜಿಲ್ಲಾವಾರು/ ತಾಲ್ಲೂಕುವಾರು ವಿವರ ನೀಡುವುದು).

ಆ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ಶೇ. 90 ರಷ್ಟು ವಿಕಲತೆ ಹೊಂದಿದ ವಿಕಲಚೇತನರು ಮತ್ತು 50 ವರ್ಷ ಮೀರಿದ ವಿಧವೆಯರ ಸಂಖ್ಯೆ ಎಷ್ಟು;